ಓ.ಎಸ್. ನಂ. 19/2013

ಪಿ.ಡಬ್ಲ್ಯು: 02 (Anjinappa)

ದಿನಾಂಕಃ 18.07.2024 ರಂದು ಮುಖ್ಯ ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಶ್ರೀ ASP ವಕೀಲರಿಂದಃ

ಸಾಕ್ಷ್ಯ ರೂಪದಲ್ಲಿ ಹಾಜರು ಪಡಿಸಿರುವ ನನ್ನ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ತಿಳಿದುಕೊಂಡು ನಾನು ನನ್ನ ಸಹಿ ಮಾಡಿದ್ದೇನೆ.

ಮುಖ್ಯ ವಿಚಾರಣೆಃ ಮುಕ್ತಾಯ.

ಪಾಟೀ ಸವಾಲು ಪ್ರತಿವಾದಿಗಳ ಶ್ರೀ SMS ವಕೀಲರಿಂದಃ

ನನಗೆ ದಾವೆಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ, ಭಾಗ ಆಗಿರುವುದಿಲ್ಲ ಎಂಬ ಮಾಹಿತಿ ಇದೆ. ಶಿವಣ್ಣರವರು ಕಲ್ಲಣಗೌಡ, ಈಶ್ವರಗೌಡ ಅವರ ವಿರುದ್ದ ಈ ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾ ಸ್ವತ್ತುಗಳ ವಿವರ, ಚೆಕ್‌ಬಂದಿ, ಸರ್ವೆ ನಂಬರ್ ಇತರ ವಿಚಾರಗಳು ನನಗೆ ಗೊತ್ತಿಲ್ಲ. ವಾದಿಯವರ ಪೂರ್ವಜರ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ. ದಾವಾ ಆಸ್ತಿ ಮೂಲತಃ ವಾದಿಯ ತಂದೆಯ ಮತ್ತು ಅಜ್ಜಂದಿರ ಆಸ್ತಿಯಾಗಿರುತ್ತದೆ. ಈ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಸದರಿ ಜಮೀನುಗಳನ್ನು ವ್ಯವಸಾಯ ಮಾಡಿದ ಕಾರಣ ನನಗೆ ಗೊತ್ತು. ದಾವಾ ಸ್ವತ್ತುಗಳ ಬಳಿ ನನ್ನ ಜಮೀನು ಇಲ್ಲ. ಎಷ್ಟು ವಿಸ್ತೀರ್ಣ ಹಾಗೂ ಯಾವ ಸರ್ವೆ ನಂಬರನ್ನು ವ್ಯವಸಾಯ ಮಾಡಿದ್ದೇನೆ ಎಂದರೆ ನಾನು ಕೂಲಿ ಕೆಲಸಕ್ಕೆ ಹೋಗಿದ್ದೇನೆ, ಆ ಕಾರಣ ನನಗೆ ಆ ಮಾಹಿತಿಗಳು ಇಲ್ಲ.

ನನಗೆ 2 ಎಕರೆ ಜಮೀನು ಇದೆ. ನನಗೆ ಜಮೀನು ಇರುವ ಕಾರಣ ಇತರರ ಜಮೀನಿಗೆ ಕೂಲಿ ಕೆಲಸಕ್ಕೆ ಹೋಗುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವೆಯ ಪಕ್ಷಗಾರರು ನನ್ನನ್ನು ಕೂಲಿ ಕೆಲಸಕ್ಕೆ ಕರೆದಿರುವುದಿಲ್ಲ, ನಾನು ಇತರೇ ಕೂಲಿ ಕೆಲಸದವರೊಂದಿಗೆ ಹೋಗಿರುತ್ತೇನೆ.

ವಾದಿಯ ತಂದೆಯ ಹೆಸರು ಗುರುಸಿದ್ದನಗೌಡ. ಅವರನ್ನು ನಾನು ನೋಡಿರುವುದಿಲ್ಲ. ಅವರ ಹೆಂಡತಿಯ ಹೆಸರು ಬಸಮ್ಮ ಆಗಿರುತ್ತದೆ. ಅವರಿಗೆ 5 ಜನ ಮಕ್ಕಳು ಇರುತ್ತಾರೆ. ಅವರಲ್ಲಿ 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಅವರುಗಳ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿವೆ. ಆದ ಕಾರಣ ಆತನೇ ಅದರ ಮಾಲೀಕ ಎಂದರೆ ಹೌದು. ಆತನೇ ಅದರ ಸ್ವಾಧೀನದಲ್ಲಿದ್ದಾನೆ ಎಂದರೆ ಹೌದು. ದಾವಾ ಆಸ್ತಿಗಳು ವಾದಿಯ ಹೆಸರಿನಲ್ಲಿಲ್ಲ ಎಂದರೆ ಹೌದು. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ಯಾರ ಬಳಿ ಖರೀದಿ ಮಾಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯೇ ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿದ್ದಾನೆ ಎಂದರೆ ಭಾಗ ಆಗದ ಕಾರಣ ಅವನೇ ಉಳುಮೆ ಮಾಡುತ್ತಿದ್ದಾನೆ. ವಾದಿಯ ಜೊತೆ ಭಾಗ ಕೇಳಲು ನಾನು ಹೋಗಿರುವುದಿಲ್ಲ.

ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿಗಳಲ್ಲ, ಪಿತ್ರಾರ್ಜಿತ ಆಸ್ತಿಯಲ್ಲ ಎಂದರೆ ಅದು ಅಜ್ಜನ ಆಸ್ತಿಯಾಗಿರುತ್ತದೆ.

ನನಗೆ ವಾದಿ 28 ವರ್ಷಗಳಿಂದ ಪರಿಚಯ ಇರುತ್ತಾರೆ. ಈಶ್ವರಪ್ಪ ಅವರ ವಂಶದ ಬಗ್ಗೆ ನನಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿಯ ಹೆಂಡತಿಯ ಹೆಸರು ನೀಲಮ್ಮ ಹಾಗೂ ಮಕ್ಕಳು ಹೆಸರು ಗುರುಸಿದ್ದನಗೌಡ, ಮರಳುಸಿದ್ದನಗೌಡ. ಅವರ ಇತರ ಮಕ್ಕಳು ಬಗ್ಗೆ ನನಗೆ ಗೊತ್ತಿಲ್ಲ. ವಾದಿಗೆ ಒಟ್ಟು 5 ಜನ ಮಕ್ಕಳು, ಅವರ ಹೆಸರು ನನಗೆ ಗೊತ್ತಿಲ್ಲ. ವಾದಿ ಹಾಗೂ ಆತನ ಸಹೋದರರು ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದರೆ ಜಂಟಿಯಾಗಿದ್ದರು, ಸಾಕ್ಷಿ ಮುಂದುವರೆದು ವಾದಿ ಮದುವೆಯ ನಂತರ ಆತನ ಪತ್ನಿಯ ಊರಿನಲ್ಲಿ ವಾಸಿಸುತ್ತಿದ್ದ, ಹಾಗೂ ದಾವಾ ಸ್ವತ್ತುಗಳನ್ನು ಉಳುಮೆ ಮಾಡಿರುವುದಿಲ್ಲ. ವಾದಿ ಎಷ್ಟನೇ ಇಸವಿಯಲ್ಲಿ ಮದುವೆಯಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆತನಿಗೆ 70 ವರ್ಷ ಆಸುಪಾಸು ಇರುತ್ತದೆ. ಅಂದಾಜು 30 ವರ್ಷಗಳ ಹಿಂದೆ ಆತನ ಮದುವೆಯಾಗಿರುತ್ತದೆ ಎಂದರೆ ಹೌದು. ದಾವಾ ಆಸ್ತಿಯ ಬಗ್ಗೆ ಹಾಗೂ ವಾದಿಯ ಬಗ್ಗೆ ಮತ್ತು ಆತನ ಸಹೋದರರ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ವಾದಿ ನನ್ನ ಸ್ನೇಹಿತರಾದ ಕಾರಣ ನಾನು ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಹಾಗೂ ಆತನ ಮಕ್ಕಳು ಮತ್ತು ಹೆಂಡತಿ 1996 ರಲ್ಲಿ 1 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿ, 1 ನೇ ಪ್ರತಿವಾದಿ, 3 ನೇ ಪ್ರತಿವಾದಿಯ ಗಂಡ 2 ನೇ ಪ್ರತಿವಾದಿಗೆ 1996 ರಲ್ಲಿ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. 2000 ರಲ್ಲಿ 1 ನೇ ಪ್ರತಿವಾದಿಗೆ ವಾದಿ ಮನೆ ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ.

ವಾದಿಯ ಸಹಿ ನಾನು ನೋಡಿದರೆ ಗುರುತಿಸಲಾರೆ. ವಾದಿ ಮೇಲೆ ಹೇಳಿದ ಪತ್ರಗಳನ್ನು ಬರೆದುಕೊಟ್ಟಿರುವ ಮಾಹಿತಿ ನನಗೆ ತಿಳಿಸಿದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಸಂಪೂರ್ಣ ಮಾಹಿತಿ ಇಲ್ಲ, ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ತಿಳಿದಿರುವ ಮಾಹಿತಿಯನ್ನು ನಾನು ಹೇಳುತ್ತಿದ್ದೇನೆ.

ಪಾಟೀ ಸವಾಲು ಮುಕ್ತಾಯ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.